This Question Paper consists of 31questions and 12 printed pages.
ಈ ಪ್ರಶ್ನೆಪತ್ರಿಕೆಯಲ್ಲಿ 31 ಪ್ರಶ್ನೆಗಳಿದ್ದು 12 ಮುದ್ರಿತ ಪುಟಗಳನ್ನು ಹೊಂದಿದೆ.

Code No. **71/S/208/A**
ಕೋಡ್ ನಂ.

Roll No.
ರೋಲ್ ನಂ.

| | | | | | | | | | | | |
|---|---|---|---|---|---|---|---|---|---|---|---|
| | | | | | | | | | | | |

# KANNADA
# ಕನ್ನಡ
# (208)

Serial No.

Day and Date of Examination :
ಪರೀಕ್ಷೆಯ ದಿನ ಮತ್ತು ತಾರೀಖು ____________________

Signature of Invigilators : 1. ____________________
ಉಸ್ತುವಾರಿದಾರರ ರುಜು
2. ____________________

UNNATI EDUCATIONS EK KADAM UNNATI KI AUR

**ಸಾಮಾನ್ಯ ಸೂಚನೆಗಳು :**

1. ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯ ಮೊದಲ ಪುಟದಲ್ಲಿ ತಮ್ಮ ರೋಲ್ ನಂಬರ್ ಬರೆಯಬೇಕು.

2. ನಿಮಗೆ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಮೊದಲ ಮೇಲ್ಭಾಗದಲ್ಲಿ ಕೊಟ್ಟಿರುವ ಒಟ್ಟು ಪುಟಗಳ ಸಂಖ್ಯೆ ಹಾಗೂ ಒಟ್ಟು ಪ್ರಶ್ನೆಗಳ ಸಂಖ್ಯೆಗೆ ತಕ್ಕಂತೆ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳೂ ಹಾಗೂ ಪ್ರಶ್ನೆಗಳು ಮುದ್ರಿತವಾಗಿದೆಯೇ ಎಂದು ಪರೀಕ್ಷಿಸಿ, ಪ್ರಶ್ನೆಗಳ ಕ್ರಮಸಂಖ್ಯೆ ಸರಿಯಾಗಿದೆಯೇ ಎಂದು ಪರೀಕ್ಷಿಸಿ.

3. ವಸ್ತುನಿಷ್ಠ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಪ್ರಶ್ನೆಯ ಜೊತೆಯಲ್ಲಿ ನೀಡಿರುವ ಉತ್ತರಗಳಿಂದಲೇ ಆರಿಸಿಕೊಳ್ಳಬೇಕು. ನಿಮಗೆ ಕೊಟ್ಟಿರುವ ಬೇರೆ ಉತ್ತರ ಪತ್ರಿಕೆಯಲ್ಲಿ ಸರಿಯಾದ ಉತ್ತರ ಸಂಖ್ಯೆ (A), (B), (C) ಮತ್ತು (D) ಯನ್ನು ಬರೆಯಬೇಕು.

4. ಎಲ್ಲಾ ಪ್ರಶ್ನೆಗಳಿಗೂ ನಿರ್ದಿಷ್ಟ ಸಮಯದಲ್ಲಿಯೇ ಉತ್ತರ ಬರೆಯಬೇಕು. ವಸ್ತುನಿಷ್ಠ ಪ್ರಶ್ನೆಗಳಿಗೆ ಬೇರೆ ಸಮಯವನ್ನು ನೀಡಲಾಗುವುದಿಲ್ಲ.

5. ನಿಮ್ಮ ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ನಿರ್ದಿಷ್ಟ ಜಾಗದಲ್ಲಿ ಮಾತ್ರ ನಿಮ್ಮ ರೋಲ್ ನಂಬರ್ ಬರೆಯಬೇಕು. ಹಾಗಲ್ಲದೇ ಬೇರೆ ಎಲ್ಲಿಯೂ ನಿಮ್ಮ ಗುರುತು ನೀಡಬಹುದಾದ ನಿಮ್ಮ ರೋಲ್ ನಂಬರ್ ಅನ್ನು ಬರೆಯಕೂಡದು. ಒಂದು ವೇಳೆ ಹಾಗೇನಾದರೂ ಕಂಡುಬಂದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಅನೂರ್ಜಿತಗೊಳಿಸಲಾಗುವುದು.

6. ನಿಮ್ಮ ಪ್ರಶ್ನೆ ಪತ್ರಿಕೆಯ ಕೋಡ್ ನಂಬರ್ **71/S/208/A** ಉತ್ತರ ಪತ್ರಿಕೆಯಲ್ಲಿ ಬರೆಯಿರಿ.



UNNATI EDUCATION
9899436384: 9654-279-279

# KANNADA
# ಕನ್ನಡ
# (208)

Time : 3 Hours] [Maximum Marks : **100**

**ಸಮಯ : 3 ಗಂಟೆಗಳು]** **[ಗರಿಷ್ಠ ಅಂಕಗಳು : 100**

---

**ಸೂಚನೆಗಳು:** (1) ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಉತ್ತರ ಪುಸ್ತಕದಲ್ಲೇ ಬರೆಯಿರಿ.

(2) ಪ್ರಶ್ನೆ ಮತ್ತು ಉಪ–ಪ್ರಶ್ನೆಗಳ ಸಂಖ್ಯೆಗಳನ್ನು ಸರಿಯಾಗಿ ಬರೆಯಿರಿ.

| | |
|---|---|
| (1) | Answers of all questions are to be given in the Answer-Book given to you. |
| (2) | 15 minutes time has been allotted to read this question paper. The question paper will be distributed at 2:15 p.m. From 2:15 p.m. to 2:30 p.m., the students will read the question paper only and will not write any answer on the Answer-Book during this period. |

UNNATI EDUCATIONS
EK KADAM UNNATI KI AUR

## PART-A
## ವಿಭಾಗ–ಎ

ಸೂಚನೆ– ಆಂತರಿಕ ಆಯ್ಕೆ ಪ್ರಶ್ನೆಗಳನ್ನು ಹೊರತುಪಡಿಸಿ. ಉಳಿದ ಎಲ್ಲಾ ಪ್ರಶ್ನೆಗಳಿಗೂ ಕಡ್ಡಾಯವಾಗಿ ಉತ್ತರಿಸಿ:

ಹತ್ತು ಜನರ ಕ್ಷೇಮಕ್ಕಾಗಿ ಒಬ್ಬಬ್ಬರು ಹಿರಿಯರಿಗೆ, ಇಷ್ಟವಲ್ಲದ ರೀತಿಯಲ್ಲಿ ಈ ದಿನಗಳಲ್ಲಿ ನಾನು ನಡೆದುಕೊಳ್ಳಬೇಕಾಗಿ ಬಂದ ಸಂದರ್ಭ ಇನ್ನು ಕೆಲವನ್ನು ಇಲ್ಲಿ ಹೇಳಬೇಕು. ಕೊಪ್ಪದ ತಾಲೂಕಿನ ಒಂದು ಗ್ರಾಮದ ದೇವಾಲಯದ ವರ್ಷದ ಉತ್ಸವದಲ್ಲಿ ಜಾತ್ರೆ ನಡೆಯುವುದು ವಾಡಿಕೆ. ಆ ವರ್ಷ ಆ ಗ್ರಾಮದ ಜನರಲ್ಲಿ, ಹತ್ತಿರದ ಕೆಲವು ಗ್ರಾಮದಲ್ಲಿ ಕೆಲವು ಜನರಿಗೆ, ಮೈಲಿಬಂದದ್ದು. ವರದಿಯಾಗಿತ್ತು. ಆರೋಗ್ಯ ಇಲಾಖೆಯ ಅಧಿಕಾರಿಗಳು, 'ಈ ಸಮಯದಲ್ಲಿ ಇಲ್ಲಿ ಹೊರಗಿನ ಜನ ನೆರೆದರೆ ರೋಗ ಹರಡುತ್ತದೆ. ಸದ್ಯ ಇಲ್ಲಿ ಜಾತ್ರೆ ನೆರೆಯದೆ ಇರುವುದು ಒಳ್ಳೆಯದು' ಎಂದು ನನಗೆ ಸೂಚನೆ ಮಾಡಿದರು. ಮಲೆನಾಡಿನಲ್ಲಿ 'ಮೈಲಿ' ಎನ್ನುವುದು ಬಯಲು ಸೀಮೆಯ 'ದೊಡ್ಡಮ್ಮ' ರೋಗ ಬಯಲು ಸೀಮೆಯಲ್ಲಿಯೂ ಈ ರೋಗ ಬಂದರೆ ಪ್ರಾಣಕ್ಕೆ ಭಯವುಂಟು. ಮಲೆನಾಡಿನಲ್ಲಿ 'ಮೈಲಿ' ಎಂದರೆ ಪ್ರಾಣದ ಭಯ ಮಾತ್ರವಲ್ಲ. ಸಾವು ಕಟ್ಟಿಟ್ಟಿದ್ದು, ಹತ್ತು ಜನರಲ್ಲಿ ಒಬ್ಬರು ತಪ್ಪಿಸಿಕೊಳ್ಳಬಹುದು ಆರೋಗ್ಯದ ಅಧಿಕಾರಿಗಳ ವರದಿ ಕಂಡೊಡನೆ ನಾನು ಆ ಜಾತ್ರೆ ನಡೆಯುವುದು ಬೇಡ, ಎಂದು ಅಪ್ಪಣೆ ಮಾಡಿದೆನು. ದೇವಾಲಯದ ಧರ್ಮದರ್ಶಿಗಳು, 'ಜಾತ್ರೆಯಿಂದ ದೇವಾಲಯಕ್ಕೆ ವರ್ಷ ವರ್ಷವೂ ಒಳ್ಳೇ ವರಮಾನ ಇದೆ. ಜಾತ್ರೆ ನಡೆಯದಿದ್ದರೆ ದೇವರಿಗೆ ವರಮಾನ ಇಲ್ಲವಾಗುತ್ತದೆ. ವರ್ಷವೆಲ್ಲಾ ವೆಚ್ಚಕ್ಕೆ ಕಾಸಿಲ್ಲದೆ ಹೋಗುತ್ತದೆ. ಮೈಲಿ ಹರಡುತ್ತದೆ ಎನ್ನುವ ಅಪಾಯ ಇಲ್ಲ, ಎಂದು ಪ್ರಾರ್ಥನೆ ಕಳುಹಿಸಿದರು. ತಾಲೂಕು ಸಬ್‌ಡಿವಿಷನ್, ಮೂಲಕ ಇದು ನನಗೆ ಬಂದಿತು ನಾನು "ದೇವಸ್ಥಾನಕ್ಕೆ ವರಮಾನ ಕಡಿಮೆಯಾಗುತ್ತದೆ. ಎಂಬ ಭಯಕ್ಕಾಗಿ ಮೈಲಿ ವ್ಯಾಧಿ ಹರಡಿದರೂ ಹರಡಲಿ ಎನ್ನಲಾರೆ, ದೇವಸ್ಥಾನಕ್ಕೆ ಬೇರೆ ರೀತಿಯಲ್ಲಿ ಹಣ ಬರುವಂತೆ ಯೋಚನೆ ಮಾಡಬಹುದು. ಜಾತ್ರೆ ನೆರೆದು ರೋಗ ಹರಡಿದರೆ, ಆ ಮೇಲಿನ ಪಶ್ಚಾತ್ತಾಪ ಅಸಹನೀಯ ಆದೀತು ಎಂದು ತಿಳಿಸಿದೆನು. ಶ್ರೀ ಹೊಸಕೊಪ್ಪ ಕೃಷ್ಣರಾಯರು ಈ ವಿಷಯ ಪುನರಾಲೋಚನೆ ಮಾಡಬೇಕೆಂದು ನನಗೆ ಪತ್ರ ಬರೆದರು ನಾನು 'ಮೈಲಿ ಹರಡುವುದಿಲ್ಲ ಎಂದು ಯಾರು ಧೈರ್ಯ ಹೇಳಬಲ್ಲರು? ಹರಡೀತು ಎನ್ನುವ ಭಯವಿರುವಾಗ ನಾನು ಪುನರಾಲೋಚನೆ ಏನು ಮಾಡಲಿ? ಎಂದೆನು ದೇವರಿಗೆ ವರಮಾನ ಇಲ್ಲದಂತೆ ಮಾಡಿದೆನೆಂದು ಈ ಜನರಿಗೆಲ್ಲ ಅಸಮಾಧಾನ ಆಯಿತು.



UNNATI EDUCATION
9899436384: 9654-279-279

1. ಗದ್ಯಭಾಗವನ್ನು ಓದಿ ಅರ್ಥ ಮಾಡಿಕೊಂಡಿರುವ ಪ್ರಕಾರ ಈ ಕೆಳಕಂಡ ವಾಕ್ಯಗಳಿಗೆ ಸರಿ–ತಪ್ಪು ತಿಳಿಸಿ. **[3×1=3]**

(a) ಕೊಪ್ಪದ ತಾಲ್ಲೋಕಿನ ಒಂದು ಗ್ರಾಮದಲ್ಲಿ ದೇವಾಲಯದ ವಾರ್ಷಿಕ ಉತ್ಸವದಲ್ಲಿ ಜಾತ್ರೆ ನೆರೆಯುವುದು ವಾಡಿಕೆ.

(b) 'ಆ' 'ಗ್ರಾಮ'ದ ಜನರಲ್ಲಿ ಆ ಗ್ರಾಮದ ಹತ್ತಿರದ ಕೆಲವು ಗ್ರಾಮಗಳಲ್ಲಿ, ಕೆಲವು ಜನರಿಗೆ 'ಮೈಲಿ' ಬಂದದ್ದು, ವರದಿಯಾಗಿರಲ್ಲಿಲ್ಲ.

(c) 'ಮೈಲಿ' ಎನ್ನುವುದು ಬಯಲು 'ಸೀಮೆಯ' 'ದೊಡ್ಡಮ್ಮ' ರೋಗ.

2. ಓದಿದ ಗದ್ಯಭಾಗಕ್ಕೆ ಸಂಬಂಧಿಸಿದ ಕೆಳಗಿನ ಪ್ರಶ್ನೆಗಳಿಗೆ ಒಂದು ಪದದಲ್ಲಿ ಉತ್ತರಿಸಿ: **[3×1=3]**

(a) ಮಲೆನಾಡಿನಲ್ಲಿ 'ಮೈಲಿ' ರೋಗ ಬಂದರೆ ಯಾವ ಭಯ ಕಾಡುತ್ತಿತು?

(b) ದೇವಾಲಯದ ಧರ್ಮದರ್ಶಿಗಳು 'ಜಾತ್ರೆಯಿಂದ ದೇವಾಲಯಕ್ಕೆ ವರ್ಷವರ್ಷವೂ 'ಏನು' ಬರುತ್ತದೆ, ಎಂದು ಹೇಳಿದರು?

(c) 'ಜಾತ್ರೆ ನಡೆಸುವ ವಿಷಯದ ಬಗ್ಗೆ ಯಾರು ಪುನರಾಲೋಚನೆ ಮಾಡಬೇಕೆಂದು ತಿಳಿಸಿದರು?

3. ಈ ಕೆಳಕಂಡ ಸೂಚಿಸಿದ ಪದವನ್ನು ಸರಿಯಾಗಿ ಆರಿಸಿ ಬರೆಯಿರಿ. **[1×1=1]**

(i) 'ಭಯ' ಈ ಪದದ ವಿರುದ್ಧ ಪದ

(A) ಧೈರ್ಯ (B) ಅಭಯ

(C) ನಿರ್ಭಯ (D) ಹೆದರಿಕೆ

(ii) 'ವ್ಯಾಧಿ' ಈ ಪದದ ಸಮಾನಾರ್ಥಕ ಪದ

(A) ರೋಗ (B) ನಿವ್ಯಾರ್ಧಿ

(C) ವಾರಿಧಿ (D) ಸಾಂಕ್ರಾಮಿಕ

UNNATI EDUCATIONS
EK KADAM UNNATI KI AUR

4. ಈ ಕೆಳಕಂಡ ಸಾಲುಗಳನ್ನು ಪರಾಮರ್ಶಿಸಿ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ: **[5×1=5]**

ನೀವು 'ರಾಜೇಶ್ವರಿ' ಧಾರವಾಡ ನಿವಾಸಿ ಎಂದು ಭಾವಿಸಿ 'ವಿಜಯವಾಣಿ' ಪತ್ರಿಕೆಯ ಸಂಪಾದಕರಿಗೆ' ನಗರದ ಒಳಚರಂಡಿಗಳಲ್ಲಿ ಆಗಾಗ್ಗೆ, 'ತ್ಯಾಜ್ಯ ನೀರು ಸರಾಗವಾಗಿ ಹರಿಯದೆ ಕೆಟ್ಟಿಕೊಳ್ಳುತ್ತಿದ್ದು, ಎಲ್ಲಾ ಕಡೆ ಕೊಳಚೆ ನೀರಿನ, ದುರ್ವಾಸನೆ ಹರಡಿ, 'ಜನರಿಗೆ ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆ ಇರುತ್ತದೆ. ಕೆಲವು ಕಡೆ, 'ಚರಂಡಿಗಳ' ಪೈಪುಗಳು ಒಡೆದು ಹೋಗಿ ರಸ್ತೆಯಲ್ಲಿ ಓಡಾಡುವ ಜನರಿಗೆ ತೊಂದರೆಯಾಗುತ್ತಿದೆ. ಎಲ್ಲಾ ಕಡೆ ಕೊಳಚೆ ನೀರಿನ ದುರ್ವಾಸನೆ ಹೆಚ್ಚಾಗಿ, ಮನೆಗಳಲ್ಲಿ ವಾಸಿಸುವವರಿಗೆ ಹಾಗೂ ರಸ್ತೆಗಳಲ್ಲಿ ಓಡಾಡುವ ಸಾರ್ವಜನಿಕರಿಗೆ ತೊಂದರೆಯಾಗಿದೆ. ಆದುದರಿಂದ ಸಂಬಂಧಪಟ್ಟವರು ಕೂಡಲೇ ಗಮನ ಹರಿಸುವಂತೆ ಮಾಡಲು ಒಂದು ಪತ್ರವನ್ನು ಬರೆಯಿರಿ.

(i) ಈ ಪತ್ರಕ್ಕೆ ಸರಿಯಾದ 'ವಿಷಯವನ್ನು ಆರಿಸಿ'

(A) ಒಳಚರಂಡಿ ದುರಸ್ತಿ

(B) ಚರಂಡಿ ಪೈಪುಗಳು ಒಡೆದಿರುವುದು

(C) ಪೈಪುಗಳನ್ನು ಬದಲಾಯಿಸುವುದು

(D) ಸ 'ತ್ಯಾಜ್ಯನೀರು' ಸರಾಗವಾಗಿ ಹರಿಯುವಂತೆ ಮಾಡುವುದು



UNNATI EDUCATION
9899436384: 9654-279-279

(ii) ಈ ಕೆಳಕಂಡ ಅಪೂರ್ಣವಾಕ್ಯವನ್ನು ಪೂರ್ಣಗೊಳಿಸಿರಿ.

ನನ್ನ ಪತ್ರವು ________ಎಂದು ಭಾವಿಸುತ್ತೇನೆ.

(A) ವಿಜಯವಾಣಿ ಪತ್ರಿಕೆಯ ಸಂಪಾದಕರ ಸಂತೋಷಕ್ಕಾಗಿ

(B) 'ಪತ್ರಿಕೆಯ ಪ್ರಸಾರದ' ಹೆಚ್ಚಳಕ್ಕೆ

(C) 'ಒಳಚರಂಡಿ ದುರಸ್ತಿ'ಯಿಂದ ನಿವಾಸಿತರಿಗೆ ಹಾಗೂ ಸಾರ್ವಜನಿಕರಿಗೆ, ಅನುಕೂಲವಾಗುತ್ತದೆ

(D) 'ರೋಗಗಳನ್ನು ಹರಡದಂತೆ, ಮಾಡಲು ಮುನ್ನೆಚ್ಚರಿಕೆ ಕ್ರಮವಾಗಿದೆ

(iii) ಈ ಪತ್ರಕ್ಕೆ ರಾಜೇಶ್ವರಿ' ರವರು ಆಯ್ಕೆ ಮಾಡಿರುವ ಸಂಬಂಧಪಟ್ಟ ದೃಷ್ಟಿಕೋನ ಈ ರೀತಿ ಇದೆ:

(1) ದಿನಪತ್ರಿಕೆಯ ಹೆಸರು

(2) ರಾಜೇಶ್ವರಿ' ರವರ ವಿಳಾಸ

(3) ಸಮಸ್ಯೆ ಕುರಿತು ಔಪಚಾರಿಕ ಧ್ವನಿ

(4) ನಗರವಾಸಿಗಳು ಬೇಸರಗೊಳ್ಳುವರು

(5) ಸಂಬಂಧ ಪಟ್ಟ ಇಲಾಖೆಯನ್ನು ಜಾಗೃತಗೊಳಿಸಿ, ಕಾರ್ಯೋನ್ಮುಖರನ್ನಾಗಿ ಮಾಡುವುದು

(A) (1) ಮತ್ತು (5) (B) (2), (3), (4)

(C) (3) ಮತ್ತು (5) (D) (1), (3), (4)

(iv) 'ಒಳ ಚರಂಡಿಗಳ ದುರಸ್ತಿ'ಗೆ ರಾಜೇಶ್ವರಿರವರು ನೀಡುವ ಪ್ರಮುಖ ಕಾರಣವೇನು?

(A) ಒಳಚರಂಡಿ ಕಟ್ಟಿಕೊಂಡಿರುವುದು

(B) ಚರಂಡಿಗಳ ದುರಸ್ತೀಕರಣ

(C) ತ್ಯಾಜ್ಯನೀರು ರಸ್ತೆಯ ಮೇಲೆಲ್ಲಾ ಹರಿಯುತ್ತಿರುವುದು

(D) ಸಾರ್ವಜನಿಕರಿಗೆ ಅನುಕೂಲಮಾಡುವುದು

v) ಈ ಪತ್ರದ ತೀರ್ಮಾನಕ್ಕೆ ಸರಿಯಾದ ಮತ್ತು ನ್ಯಾಯ ದೊರಕಿಸುವಂತಹ ಆಯ್ಕೆಯನ್ನು ಮಾಡಿರಿ?

ನನ್ನ ಅಭಿಪ್ರಾಯದಲ್ಲಿ ಮಾಧ್ಯಮಗಳು ಜನರನ್ನು ಜಾಗೃತಗೊಳಿಸಲು ಮಹತ್ವದ ಪಾತ್ರ ವಹಿಸುತ್ತವೆ. ಆದುದರಿಂದ ನನ್ನ ಆಲೋಚನೆಗಳು ದಿನಪತ್ರಿಕೆಗಳಲ್ಲಿ ಪ್ರಕಟಣಗೊಂಡರೆ ಸಾರ್ವಜನಿಕರು, ಜಾಗೃತಗೊಂಡು ಬೆಂಬಲ ನೀಡುವರು ದಯವಿಟ್ಟು ನನ್ನ ಆಲೋಚನೆಗಳನ್ನು ನಿಮ್ಮ ದಿನಪತ್ರಿಕೆಯಲ್ಲಿ ಪ್ರಕಟಿಸುತ್ತೀರಾ ಎಂಬ ಭರವಸೆ ಇದೆ ಏಕೆಂದರೆ ಸಂಬಂಧ ಪಟ್ಟ ಪ್ರಾಧಿಕಾರ ಮುಂದಿನ ಕ್ರಮತೆಗೆದುಕೊಳ್ಳಬಹುದು.

(A) ಹೌದು ಆಯ್ಕೆಗೆ (i) ಏಕೆಂದರೆ ಇದು ಅಧಿಕಾರಯುತ ಧ್ವನಿಯಾಗಿದೆ

(B) ಇಲ್ಲ ಆಯ್ಕೆಗೆ (i) ಏಕೆಂದರೆ ಇದು ಅನೌಪಚಾರಿಕ ಧ್ವನಿಯಾಗಿದೆ

(C) ಹೌದು ಆಯ್ಕೆಗೆ (2) ಏಕೆಂದರೆ ಇದು ವಿನಮ್ರ ನಿರೀಕ್ಷಕ ಧ್ವನಿಯಾಗಿದೆ

(D) ಇಲ್ಲ ಆಯ್ಕೆಗೆ (2) ಏಕೆಂದರೆ ಇದು ನಿಶ್ಚಿತ ಧ್ವನಿಯಾಗಿದೆ



UNNATI EDUCATION
9899436384: 9654-279-279

**5.** ಈ ಕೆಳಗೆ ಕೊಟ್ಟಿರುವ ಸಾಲುಗಳನ್ನು ಪರಾಮರ್ಶಿಸಿ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ: **[4×1=4]**

'BSNL' ಸಂಸ್ಥೆಯವರು ಒಂದು ದಿನದ ಮಟ್ಟಿಗೆ ಧ್ವನಿ ಸ್ಪಷ್ಟತೆಗೆ "ಪ್ರಮುಖ ದುರಸ್ತಿ" ಕಾಮಗಾರಿ ನಡೆಸಬೇಕಾಗಿರುವುದರಿಂದ "ಒಂದು ದಿನ" ಟಾವರ್–ಆಫ್ ಆಗುವ ಸೂಚನೆಯನ್ನು ಏಪ್ರಿಲ್–25 ರಂದು ನೀಡಿರುತ್ತಾರೆ. ಇದು 12 ಗಂಟೆಯ ಅವಧಿಗೆ ಸಂಬಂಧಿಸಿದ ಸೂಚನೆಯಾಗಿರುತ್ತದೆ.

(ಬೆಳಿಗ್ಗೆ 6 ಗಂಟೆಯಿಂದ ಸಾಯಂಕಾಲ 6 ಗಂಟೆಯವರೆಗೆ ಟವರ್ ಆಫ್ ಇರುತ್ತದೆ)

(i) ಮೇಲ್ಕಂಡ ವಾಕ್ಯವೃಂದಕ್ಕೆ ಸೂಕ್ತ ತಲೆಬರಹ ಆರಿಸಿ.

(A) ಮಾಹಿತಿ ಇರಲಿ

(B) ಬೇರೆ ಟಾವರ್ ಬಳಸಿಕೊಳ್ಳಿ

(C) ಒಂದು ದಿನ 'BSNL' ಟಾವರ್ ಆಫ್

(D) ಸುಂದರ ಟಾವರ್

ಅಥವಾ

ಮೇಲ್ಕಂಡ ವಿಷಯಕ್ಕೆ ಅಂತ್ಯದ, ತೀರ್ಮಾನವನ್ನು ಸೂಚನೆಗೆ ಗುರುತಿಸುವುದು.

(A) ನಿಮಗೆ ತಿಳಿದಿರಲಿ (B) ಸಹಕರಿಸಲು ವಿನಂತಿಸಲಾಗಿದೆ

(C) ಸಿದ್ಧರಾಗಿರಿ (D) ನೀವು ಬೇರೆ ನೆಟ್‌ವರ್ಕ್‌ಗೆ ಹೋಗಬೇಕು

(ii) ಟವರ್ ಆಫ್ ಮಾಡಲು ಕಾರಣ

(A) ಕೆಲಸಗಾರರು ಇಲ್ಲ (B) ವಿದ್ಯುತ್‌ಕೊರತೆ

(C) ಟಾವರ್ ಬಿದ್ದಿದೆ (D) ಧ್ವನಿ ಸ್ಪಷ್ಟತೆಗಾಗಿ

(iii) ಟವರ್ ಆಫ್ ಮಾಡುವ ಸಮಯ:

(A) 12 ಗಂಟೆಗಳು (B) 6 ಗಂಟೆಗಳು

(C) 24 ಗಂಟೆಗಳು (D) 6 ಗಂಟೆ 10 ನಿಮಿಷ

(iv) ಮೊಬೈಲ್ ಫೋನ್ ಟವರ್‌ಗಳಿಂದಾಗುವ ಹಾನಿ:

(A) ವಾಹನಗಳಿಗೆ ತೊಂದರೆ (B) ವೃದ್ಧರಿಗೆ ತೊಂದರೆ

(C) ಪಕ್ಷಿಗಳ ಸಂತತಿ ಕ್ಷೀಣಿಸುತ್ತಿದೆ (D) ಪ್ರಾಣಿಗಳಿಗೆ ಭಯ

**6.** ಈ ಕೆಳಗಿನ ವ್ಯಕ್ತಿ ಚಿತ್ರಣವನ್ನು ಗಮನಿಸಿ ಸರಿಯಾಗಿ ಓದಿ, ಕೊಟ್ಟ ಪ್ರಶ್ನೆಗಳಿಗೆ ಉತ್ತರಿಸಿ. **[4×1=4]**

ದತ್ತಾತ್ರೇಯ ರಾಮಚಂದ್ರ ಬೇಂದ್ರೆ (ದ.ರಾ.ಬೇಂದ್ರೆ) ಅವರು "ಅಂಬಿಕಾತನಯದತ್ತ" ಕಾವ್ಯ ನಾಮದಿಂದ ಕಾವ್ಯರಚಿಸಿ ವರಕವಿ ಹೆಸರಿಗೆ ಪಾತ್ರರಾಗಿದ್ದಾರೆ. 1896 ರಲ್ಲಿ ಧಾರವಾಡದಲ್ಲಿ ಜನಿಸಿದರು. ಶ್ರೀಯುತರು ಕವಿತೆ, ನಾಟಕ, ವಿಮರ್ಶೆ, ಸಂಶೋಧನೆ ಮುಂತಾದ ಪ್ರಕಾರಗಳಲ್ಲಿ ವಿಪ್ರಲ ಸಾಹಿತ್ಯ ರಚಿಸಿ, ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ ಅಧ್ಯಾಪಕ ವೃತ್ತಿಯಲ್ಲಿದ್ದು ಮಹಾರಾಷ್ಟ್ರ, ಕರ್ನಾಟಕದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿ ಧಾರವಾಡದ ಸಾಧನಕೇರಿಯಲ್ಲಿ ನೆಲೆಸಿದರು. 'ಗರಿ' ಸಖೀಗೀತ' ಗಂಗಾವತರಣ 'ನಾದಲೀಲೆ' ಉಯ್ಯಾಲೆ'–ಅರಳು–ಮರಳು 'ನಾಕುತಂತಿ' ಇತ್ಯಾದಿ ಕವನ ಸಂಕಲನಗಳು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪದ್ಮಶ್ರೀ, ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದು ಖ್ಯಾತನಾಮರಾಗಿದ್ದಾರೆ ಅವರು 1981ರಲ್ಲಿ ದೈವಾಧೀನರಾದರು.



UNNATI EDUCATION
9899436384: 9654-279-279

(i) 'ಬೇಂದ್ರೆ' ಯವರ, ಕಾವ್ಯನಾಮವನ್ನು ಗುರುತಿಸಿ.

(A) ಅಂಬಿಕಾತನಯ ದತ್ತ (B) ಕುವೆಂಪು

(C) ಮಾಸ್ತಿ (D) ಸಿಪಿಕೆ

(ii) ಬೇಂದ್ರೆಯವರು ಜನಿಸಿದ ಸ್ಥಳ ಯಾವುದು?

(A) ಮೈಸೂರು (B) ಶಿವಮೊಗ್ಗ

(C) ಹುಬ್ಬಳ್ಳಿ (D) ಧಾರವಾಡ

(iii) ಬೇಂದ್ರೆಯವರು ಜನಿಸಿದ ಇಸವಿ ಯಾವುದು?

(A) 1896 (B) 1996

(C) 1786 (D) 1886

(iv) 'ಬೇಂದ್ರೆಯವರು ಪಡೆದ ಅತ್ಯುನ್ನತ ಪ್ರಶಸ್ತಿ ಯಾವುದು?

(A) ಜ್ಞಾನಪೀಠ (B) ಪದ್ಮಶ್ರೀ

(C) ಅಕಾಡೆಮಿ (D) ವರಕವಿ

(v) ಬೇಂದ್ರೆಯವರು ಬರೆದ ಕವನ ಸಂಕಲನಗಳು ಯಾವುವು?

(A) ಉಯ್ಯಾಲೆ–ನಾಕುತಂತಿ, ಮತ್ತು ನಾದಲೀಲೆ–ಗಂಗಾವತರಣ

(B) ಕೊಳಲು

(C) ಪಾಂಚಜನ್ಯ

(D) ಕಲಾಸುಂದರಿ

UNNATI EDUCATIONS
EK KADAM UNNATI KI AUR

## ವಿಭಾಗ–ಬಿ : ವ್ಯಾಕರಣ

7. ಈ ಕೆಳಗೆ ಕೊಟ್ಟಿರುವ ಪದಗಳನ್ನು ಬಳಸಿ ಸೂಕ್ತ ವಾಕ್ಯಗಳನ್ನು ರಚನೆಮಾಡಿ (3ಕ್ಕೆ ಮಾತ್ರ) **[3×1=3]**

(i) 'ಭೂಮಿ'

(ii) ಕತ್ತಲು

(iii) ಸಂಪತ್ತು

(iv) ಶ್ರದ್ಧೆ

ಅಥವಾ

ಈ ಕೆಳಗೆ ಕೊಟ್ಟಿರುವ ವಾಕ್ಯಗಳನ್ನು ಓದಿ ಅವುಗಳ ಶುದ್ಧ ರೂಪ ಬರೆಯಿರಿ.

(i) ಮಾದೇಶರ ಸಾಮಿಗೆ ಶಿಷಂದಿರು ಬೆಕಾಗಿದರು.

(ii) ನಮ ಅಂಗೆ ಗೆರೆಗಳು ಭವಿಷ್ಯ ತಿಳಿಸುತವೆ.

(iii) ಕಾಯಿಲೆ ಭಯವನು ಹೆಚಿಸುತದೆ.

(iv) ಅಥವಿಲದ ಸಂಪದಾಯ ಆಚರಣೆ



UNNATI EDUCATION
9899436384: 9654-279-279

8. ಈ ಕೆಳಗಿನ ಪದಗಳನ್ನು ಕೂಡಿಸಿ ಬರೆಯಿರಿ ಹಾಗೂ ಸಂಧಿ ಹೆಸರು ತಿಳಿಸಿ. [3×1=3]

(i) ಪುಷ್ಪ + ಅಂಜಲಿ

(ii) ಪೂಜೆ+ಅಲ್ಲಿ

(iii) ಮತ+ ಅಂಧತೆ

ಅಥವಾ

ಈ ಕೆಳಕಂಡ ಪದಗಳನ್ನು ಬಿಡಿಸಿ ಸಂಧಿಯ ಹೆಸರನ್ನು ತಿಳಿಸಿ.

(i) ಹೊಡೆದಾಡು

(ii) ಸತ್ಯಾಗ್ರಹ

(iii) ಶೀಘ್ರೋದಯ

9. ಈ ಕೆಳಕಂಡ ವಾಕ್ಯಗಳಿಗೆ ಸೂಚನೆಗನುಗುಣವಾಗಿ ಉತ್ತರಿಸಿ: [3×1=3]

(i) "ಹಕ್ಕಿಗೆ ಆಹಾರವಾದ ಹುಳು – 'ಹಕ್ಕಿ' ಇದರ ವಚನ ರೂಪ

(ii) ಲೇಖಕರು ಗಡಿಯಾರವನ್ನು ಬಿಸಾಡಿದರು: 'ಬಿಸಾಡಿದರು' ಈ ಪದದ ರೂಪವನ್ನು ತಿಳಿಸಿ.

(iii) ಚೆನ್ನಾಗಿ ನಿದ್ದೆಯನ್ನು ಮಾಡುವವನು ಪರಮಸುಖಿ 'ನಿದ್ದೆಯನ್ನು' ಇಲ್ಲಿರುವ ವಿಭಕ್ತಿ ಪ್ರತ್ಯಯವನ್ನು ಹೆಸರಿಸಿ.

ಅಥವಾ

ಬಿಟ್ಟಿರುವ ಜಾಗಗಳನ್ನು ಸರಿಯಾದ ಪದಗಳಿಂದ ತುಂಬಿರಿ.

(i) ಓಟುರುಕ ಎಂಬುದೊಂದು_______ ಆಗಿದೆ

(A) ಕೆಸರಿನ ಆಮೆ (B) ನೀರು ಕುದುರೆ

(C) ಓತಿಕ್ಯಾತ (D) ನೀರುಕಪ್ಪೆ

(ii) ಎತ್ತಲ್ಲ ಅವು ನಮ್ಮ_______

(A) ಸ್ವತ್ತುಗಳು (B) ಮುತ್ತುಗೋಳು

(C) ಕತ್ತೆಗಳು (D) ಕುದುರೆಗಳು

(iii) ಡಾರ್ವಿನನ ವಿಕಾಸವಾದಂತೆ ಮನುಷ್ಯನ ಮೂಲ

(A) ದೇವರು (B) ಅಮೀಬಾ

(C) ಮಂಗ (D) ಚಿಂಪಾಂಜಿ



UNNATI EDUCATION
9899436384: 9654-279-279

**10.** ಈ ಕೆಳಕಂಡ ಬಿಟ್ಟಸ್ಥಳಗಳನ್ನು ಸೂಕ್ತ ಕ್ರಿಯಾಪದಗಳಿಂದ ಭರ್ತಿಮಾಡಿ (ನಾಲ್ಕಕ್ಕೆ ಮಾತ್ರ) **[4×1=4]**

(i) ಕಷ್ಟಪಟ್ಟು ದುಡಿದರೆ, ನಮ್ಮಕಷ್ಟಗಳು _____

(ii) ಕಾಯಿಲೆಯ ಬಗೆಗಿನ ಅಜ್ಞಾನ ಭಯವನ್ನು _____

(iii) ಮಾದೇಶ್ವರರು ಭಿಕ್ಷೆಯನ್ನು_____

(iv) ಪಂಡಿತರು ಗ್ರಹಣ ವಿಮೋಚನೆಯ ನಂತರ ಕಾವೇರಿ ನದಿಗೆ ಸ್ನಾನ ಮಾಡಲು_____

(v) ಗಾಂಧೀಜಿಯವರು ಹೆಂಡತಿಯಿಂದ ಅಹಿಂಸೆಯ ಪಾಠವನ್ನು _____

**11.** ಈ ಕೆಳಕಂಡ ವಾಕ್ಯಗಳಲ್ಲಿನ ಲೇಖನ ಚಿಹ್ನೆಗಳನ್ನು ಗುರುತಿಸಿ: (2ಕ್ಕೆ ಮಾತ್ರ) **[2×1=2]**

(i) ಸತ್ಯಾಗ್ರಾಹದಲ್ಲಿರುವ ಶಾಂತಿ ಸ್ಮರಣೆ ಸತ್ಯ ನಿರ್ಭಯಗಳು ಹೆಣ್ಣಿನಲ್ಲಿ ಸಹಜವಾಗಿ ಇದ್ದವು

(ii) ಬೆಳಗು ಜೀವಿಗಳ ಪಾಲಿಗೆ ಉಲ್ಲಾಸದಾಯಕ ಪ್ರಶಾಂತ ಮತ್ತು ಪವಿತ್ರವಾಗಿದೆ

(iii) ಶಾಂತಿಯ ಮದುವೆಗಿದ್ದ ತೊಂದರೆಯೇನು

## <u>ವಿಭಾಗ–ಸಿ</u> : ಸಾಹಿತ್ಯ

UNNATI EDUCATIONS
EK KADAM UNNATI KI AUR

**12.** ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ: (3ಕ್ಕೆ ಮಾತ್ರ) **[3×1=3]**

(i) _____ಬಸವಣ್ಣ ಅವರ ಅಂಕಿತ

(ii) ಶೆಂಕಮ್ಮನ ಮಕ್ಕಳು ____ರವರು

(iii) ಕಥಾನಾಯಕನಿಗೆ_____ಓದಬೇಕೆಂಬ ಆಸೆಯಿತ್ತು

(iv) ಯಾರು_____ಇಟ್ಟರು ಮನಸ್ಸು ಬನವಾಸಿಯನ್ನು ನೆನೆಯುತ್ತದೆ

**13.** ಈ ಕೆಳಕಂಡ ವಾಕ್ಯಗಳ ಸರಿಯೋ ತಪ್ಪೋ ತಿಳಿಸಿ? (3ಕ್ಕೆ ಮಾತ್ರ) **[3×1=3]**

(i) ಬನವಾಸಿಯಲ್ಲಿ ಹಣ್ಣುಬಿಟ್ಟ ಮಾವಿನ ಮರಗಳಿವೆ

(ii) ಪ್ರೀತಿ ಕಡಲಿನಂತೆ ಇಲ್ಲ

(iii) ಧರ್ಮಗಳು ಹುಟ್ಟಿದ್ದು ಮನುಕುಲದ ಉದ್ಧಾರಕ್ಕಾಗಿ

(iv) ಸ್ತ್ರೀಯರ ಮುಂದಾಳುತನದಲ್ಲಿ ಗಂಡಸರ ಮೋಕ್ಷವಿಲ್ಲ



UNNATI EDUCATION
9899436384: 9654-279-279

**14.** ಈ ಕೆಳಕಂಡ ಗದ್ಯವನ್ನು ಓದಿ ಹಾಗೂ ಕೆಳಕಂಡ ವಾಕ್ಯಗಳಲ್ಲಿ ಬಿಟ್ಟಿರುವ ಸ್ಥಳಗಳನ್ನು ತುಂಬಿರಿ. **[4×1=4]**

ರತ್ನ ವ್ಯಾಪಾರಿಯ ಮಗಳು ಸೀತೆ ಮತ್ತು ಸೋದರ ಸೊಸೆ ಶಾಂತಿಯರ ಗುಣ ಸ್ವಭಾವಗಳು ಭಿನ್ನವಾಗಿದ್ದವು. ಕಥಾನಾಯಕನು ಶಾಂತಿಯ ರೂಪ ಮತ್ತು ಗುಣಗಳಿಗೆ ಆಕರ್ಷಿತನಾದನು. ಬಡತನದ ದೆಸೆಯಿಂದ ವರದಕ್ಷಿಣೆ ಕೊಡಲಾರದ ಶಾಂತಿಗೆ ಮದುವೆಯಾಗಿರಲಿಲ್ಲ, ಸೀತೆಯನ್ನು ಮದುವೆಯಾದರೆ ಲಂಡನ್ನಿಗೆ ಹೋಗಬಹುದಾಗಿತ್ತು. ಆದರೆ ಶಾಂತಿಯನ್ನು ಪ್ರೀತಿಸತೊಡಗಿದಾಗಿನಿಂದ ಹಣಕ್ಕಾಗಿ ಪ್ರೇಮವನ್ನು ಬಲಿಕೊಡಬಾರದೆಂದು ಅವನ ಮನಸ್ಸು ಹೇಳುತ್ತಿತ್ತು ಶಾಂತಿಯನ್ನು ಮದುವೆಯಾಗುವ ಬಯಕೆ ಹಾಗೂ ಲಂಡನ್ನಿನಲ್ಲಿ ಓದುವ ಆಸೆ. ಈ ಎರಡರ ತೊಳಲಾಟದಲ್ಲಿ ಕಥಾನಾಯಕ ಮುಳುಗಿದನು .

(i) ರತ್ನ ವ್ಯಾಪಾರಿಯ ಮಗಳು______

(ii) ಕಥಾನಾಯಕನು ______ರ ರೂಪ ಮತ್ತು ಗುಣಗಳಿಗೆ ಆಕರ್ಷಿತನಾದನು.

(iii) ______ದ ಕಾರಣ ಶಾಂತಿಗೆ ಮದುವೆಯಾಗಿರಲಿಲ್ಲ

(iv) ______ಳನ್ನು ಮದುವೆಯಾದರೆ ಲಂಡನ್ನಿಗೆ ಹೋಗಬಹುದಾಗಿತ್ತು.

**15.** ಈ ಕೆಳಕಂಡ ಗದ್ಯವನ್ನು ಓದಿ ಈ ಕೆಳಕಂಡ ವಾಕ್ಯಗಳು ಸರಿಯೇ ತಪ್ಪೇ ತಿಳಿಸಿ. (3ಕ್ಕೆ ಮಾತ್ರ) **[3×1=3]**

ಕಂಪ್ಯೂಟರ್ ತಟ್ಟನೆ ಯಾರೋ ಒಬ್ಬಾತ ಅವಿಷ್ಕರಿಸಿದ ನಿರ್ಮಾಣವಲ್ಲ. ಮನುಷ್ಯನ ವಿಕಾಸದ ಕತೆಯಂತೆಯೇ 'ಕಂಪ್ಯೂಟರ್ ವಿಕಾಸದ ಕತೆ ಇದೆ. ಆದರೆ ಕಂಪ್ಯೂಟರ್‌ಗಳು ಹುಚ್ಚು ಹಿಡಿದಂಥಾ ವೇಗದಲ್ಲಿ ವಿಕಾಸಗೊಂಡು ಬೆಳೆದಿವೆ. ಅಬಾಕಸ, ಲಾಗರಿದಮಿಕ್ ಕೋಷ್ಟಕಗಳು, ಸ್ಲೈಡ್ ರೂಲ್, ಕ್ಯಾಲ್ಕುಲೇಟರ್, ಬೃಹತ್ ಕಂಪ್ಯೂಟರ್‌ಗಳು, ಇಂದಿನ ಮೇಜಿನ ಮೇಲೆ, ತೊಡೆಯ ಮೇಲೆ, ಅಂಗೈಯಲ್ಲಿ, ಮಣಿಕಟ್ಟಿನಲ್ಲಿ ಕೂರುವ ಕಂಪ್ಯೂಟರ್‌ಗಳು____ಇವು ಕಂಪ್ಯೂಟರ್ ವಿಕಾಸಗೊಂಡ ಹಾದಿಯ ಕೆಲವು ಮೈಲಿಗಲ್ಲುಗಳು. ನನ್ನ ಕಾಲೇಜು ದಿನಗಳಲ್ಲೇ ಕ್ಯಾಲ್ಕುಲೇಟರ್ ಬಳಕೆ ಸಾಮಾನ್ಯವಾಗಿತ್ತು. ನಮ್ಮ ಹಿರಿಯ ವಿದ್ಯಾರ್ಥಿಗಳ ಕೈಯಲಿದ್ದ " ಸ್ಲೈಡ್‌ರೂಲ್" ನೋಡಿದ್ದೆ ಇಂದು ನಿಮಗೆ ನೋಡಲಿಕ್ಕೊಂದು 'ಸ್ಲೈಡ್ ರೂಲ್' ಸಿಗುವುದಿಲ್ಲ. ಕೇವಲ ಎರಡು ದಶಕಗಳಲ್ಲಿ ಇಂಥಾ ಪರಿವರ್ತನೆ.

(i) 'ಮನುಷ್ಯನ ವಿಕಾಸದ ಕತೆಯಂತೆಯೇ ಕಂಪ್ಯೂಟರ್ ವಿಕಾಸದ ಕತೆ ಇಲ್ಲ

(ii) ಕಾಲೇಜು ದಿನಗಳಲ್ಲಿ ಕ್ಯಾಲ್ಕುಲೇಟರ್ ಬಳಕೆ ಇರಲಿಲ್ಲ

(iii) ಅಬಾಕಸ ಲಾಗರಿದ ಮಿಕ್ ಕೋಷ್ಠಕಗಳು, ಸ್ಲೈಡ್‌ರೂಲ್, – ಕಂಪ್ಯೂಟರ್ ವಿಕಾಸಗೊಂಡ ಹಾದಿಯ ಮೈಲಿಗಲ್ಲುಗಳು

(iv) ಕಂಪ್ಯೂಟರಗಳು ಹುಚ್ಚು ಹಿಡಿದಂತಾ ವೇಗದಲ್ಲಿ ವಿಕಾಸಗೊಂಡು ಬೆಳೆದಿಲ್ಲ

**16.** ಹೊಂದಿಸಿ ಬರೆಯಿರಿ. **[3×1=3]**

| | | | |
|---|---|---|---|
| (a) | ಹೂಗಳು | (i) | ಹೆಬ್ಬಾವು |
| (b) | ಹಸಿವು | (ii) | ಬೆಳೆ |
| (c) | ಇಳೆ | (iii) | ಸ್ತುತಿ |



UNNATI EDUCATION
9899436384: 9654-279-279

## PART-B

### ವಿಭಾಗ–ಎ

ಈ ಕೆಳಕಂಡ ಗದ್ಯಭಾಗವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿರಿ:

ಬೆಳಗಿನ ಜಾವ ಏಳಬೇಕೆನ್ನುವವರು, ಹಾಗೆ ಏಳದಿದ್ದವರನ್ನು, ಸೋಮಾರಿಗಳ ಗುಂಪಿಗೆ ಸೇರಿಸಿ, ತಾವು ಬಹಳ ಕಾರ್ಯದಕ್ಷರೆಂದು ಕೊಚ್ಚಿಕೊಳ್ಳುತ್ತಾರೆ. ಬೇಗ ಏಳುವ ಹಕ್ಕಿ ಸುಲಭವಾಗಿ ಹುಳುಗಳನ್ನು ಹಿಡಿದು ಆಹಾರ ದಕ್ಕಿಸಿಕೊಳುತ್ತದೆ. ಎಂಬ ಗಾದೆಯಿದೆ ಇದನ್ನು ಆಗಾಗ ಉದ್ಧರಿಸಿ, ಈ ಜನ ತಮ್ಮ ಕುಲದ ಬಗ್ಗೆ ಹೆಮ್ಮೆ ಪಟ್ಟು ಕೊಳ್ಳುತ್ತಾರೆ. ಈ ಗಾದೆಯಲ್ಲಿ ಬರುವ ಹಕ್ಕಿಯ ಬಗ್ಗೆ ನನಗೆ ದ್ವೇಷವಿಲ್ಲ ಅದು ಬೇಗ ಹುಳುವನ್ನು ಹಿಡಿಯಿತು. ಈ ದೃಷ್ಟಿಯಿಂದ ಅದು ಬೇಗ ಎದ್ದದ್ದು, ಸಾರ್ಥಕ ಆದರೆ ನನಗೆ ಆ ಬಡಹುಳುವಿನ ನಿರ್ಭಾಗ್ಯ ಸ್ಥಿತಿಯನ್ನು ಕಂಡು ಸಂಕಟವಾಗುತ್ತದೆ ಈ ಸಂಪತ್ತಿಗೆ ಅದು ಬೆಳಗಿನ ಜಾವಕ್ಕೆ ಎದ್ದು ತನ್ನ ದೇಹವನ್ನು ಹಕ್ಕಿಗೆ ಅರ್ಪಿಸಿಕೊಂಡು ಹಕ್ಕಿಗೆ ಕೀರ್ತಿ ತಂದು ಕೊಡಬೇಕಾಗಿತ್ತೇ? ಸೋಮಾರಿ ಎಂದು ಜಗತ್ತು ಬೈದರೂ ಚಿಂತೆಯಿಲ್ಲ, ಎಂದುಕೊಂಡು ಆ ಹುಳು ಲಕ್ಷಣವಾಗಿ ಬೆಳಗಾಗುವವರೆಗೂ ಮಲಗಿರ ಬಾರದಾಗಿತ್ತೇ? ಇದರಿಂದ ಬೆಳಗಿನ ಜಾವದ ನನ್ನ ತಿರಸ್ಕಾರ ಹೆಚ್ಚಾದೀತೇ ಹೊರತು ಬೇರೆಯಲ್ಲ ಬೆಳಗಿನಲ್ಲಿ ಎದ್ದಕೂಡಲೇ ಇಂತಹ ವಿಪತ್ತಿಗೆ ಸಿಕ್ಕುವುದಾಗಲೀ, ಇಂತಹ ಕ್ರೂರ ಬೇಟೆಗೆ ಹೊರಡುವುದಕ್ಕಾಗಲಿ ನನ್ನ ಮನಸ್ಸು ಒಪ್ಪುವುದಿಲ್ಲ ಸಮಸ್ತ ಜೀವ ಜಾಲವೂ ನವಚೇತನ ಪಡೆದು ಮುಂದುವರಿಯಲು ಬೆಳಗಿನ ಜಾವವೇ ಬಹಳ ಪ್ರಶಸ್ತವಾದ ಸಮಯವೆಂದು ಆತ ಹೇಳುತ್ತಾನೆ. ಬೆಳಗಿನ ಜಾವದಲ್ಲಿ ರಾತ್ರಿಯ ನಿಸ್ಸಾರ, ಭೀಕರ ಮೌನ ಕಳೆದು ಉಲ್ಲಾಸದಾಯಕವಾದ ಬೆಳಕು ಕಾಲಿಡುತ್ತದೆ ಹಕ್ಕಿಗಳು ಆನಂದಗೀತೆ ಹಾಡುತ್ತ ಸಾಗುತ್ತವೆ. ತಂಗಾಳಿ ಮುದದಿಂದ ತೀಡುತ್ತದೆ.

17. ಬೆಳಗಿನ ಜಾವ ಏಳದಿದ್ದದವರನ್ನು ಏನೆಂದು ಕರೆಯುತ್ತಾರೆ? ಹಾಗೂ ತಮ್ಮನ್ನು ಏನೆಂದು ಹೊಗಳಿ ಕೊಳ್ಳುತ್ತಾರೆ? **[2]**

ಅಥವಾ

ಗಾದೆಯು ಬೆಳಗಿನ ಜಾವ ಏಳುವ ಹಕ್ಕಿಯ ಬಗ್ಗೆ ಏನು ಹೇಳುತ್ತದೆ?

18. ಬಡಹುಳುವಿನ ಸ್ಥಿತಿಯ ಬಗ್ಗೆ ಲೇಖಕರು ಏನು ಹೇಳುತ್ತಾರೆ? **[2]**

ಅಥವಾ

ಲೇಖಕರಿಗೆ ಬೆಳಗಿನ ಜಾವದ ಬಗ್ಗೆ ತಿರಸ್ಕಾರ ಹೆಚ್ಚಾಗಲು ಕಾರಣವೇನು?

19. ಲೇಖಕರ ಮನಸ್ಸು ಯಾವುದನ್ನು ಒಪ್ಪುವುದಿಲ್ಲ? **[2]**

20. ಬೆಳಗಿನ ಜಾವ ಪ್ರಶಸ್ತವಾದ ಸಮಯ ಯಾವುದಕ್ಕೆ ಏಕೆ? **[2]**

21. ನೀವು ರಾಜೇಶ, ರಾಣಿ, ಮೊರಾರ್ಜಿದೇಸಾಯಿ ವಸತಿಶಾಲೆ, ಮೈಸೂರು, ಇಲ್ಲಿ ವ್ಯಾಸಂಗ ಮಾಡುತ್ತಿರುವಿರಿ, ಎಂದು ಭಾವಿಸಿ. ಕನ್ನಡ ಮತ್ತು ಆಂಗ್ಲ ಭಾಷೆಯ ನಿಘಂಟುವಿನ'5' ಪ್ರತಿಗಳನ್ನು ಕಳುಹಿಸಿ ಕೊಡಬೇಕೆಂದು, ಕೋರಿ ಸುಭಾಷ ಬುಕ್‌ಸ್ಟೋರ, ಅವೆನ್ಯೂರೋಡ್, ಬೆಂಗಳೂರು–02 ಇವರಿಗೆ–ಒಂದು ಪತ್ರ ಬರೆಯಿರಿ. **[4]**

ಅಥವಾ

ನೀವು ಜೈರಾಜ್/ಕಾವ್ಯ, ನಿಮ್ಮ ತಂದೆ ರಾಮಣ್ಣ ಊರು ಕೊಪ್ಪಳ, ನೀವು ಬಿ.ಕಾಂ ಪದವೀಧರರು ಎಂದು ಭಾವಿಸಿಕೊಂಡು 'ಆರೋಗ್ಯ ಸಹಾಯಕರು' ಹುದ್ದೆಗೆಂದು, ನಿರ್ದೇಶಕರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ' ಆನಂದರಾವ ಸರ್ಕಲ್, ಬೆಂಗಳೂರು, ಇವರ ವಿಳಾಸಕ್ಕೆ ಭರ್ತಿಗೊಳಿಸಿದ ಅರ್ಜಿ ಸಲ್ಲಿಸಿ.



UNNATI EDUCATION
9899436384: 9654-279-279

## ವಿಭಾಗ–ಬಿ : ಬರವಣಿಗೆ

**22.** ಈ ಕೆಳಕಂಡ ದೂರವಾಣಿ ಸಂಭಾಷಣೆಯನ್ನು ಓದಿ: **[2]**

ನೀವು ಕಲ್ಯಾಣಿ ಎಂದು ಭಾವಿಸಿ, ನಿಮ್ಮ ತಾಯಿ ಬರುವ ವೇಳೆಗೆ ನೀವು ಮನೆಯಲ್ಲಿರಲು ಆಗುವುದಿಲ್ಲ, ಅದಕ್ಕಾಗಿ ಮಾಹಿತಿಯನ್ನು ಬರೆದಿಡಿ.

ಸಂಭಾಷಣೆ

ದೂರವಾಣಿ ಕರೆ:– ನಾನು ಶ್ರೀಮತಿ 'ಸುಧಾಮಣಿ' ಅವರ ಹತ್ತಿರ ಮಾತನಾಡಬಹುದಾ, ನಾನು ಭಾರ್ಗವಿ ಇನ್ಫೋಟೆಕ್ನೋ ಕಂಪೆನಿಯಿಂದ.

ಕಲ್ಯಾಣಿ:– ಕ್ಷಮಿಸಿ ಅವರು ಮನೆಯಲ್ಲಿ ಇಲ್ಲ ಅತಿಥಿಗಳ ಜೊತೆ, ಹೊರಗಡೆ ಹೋಗಿದ್ದಾರೆ ನಾನು ಅವರ ಮಗಳು

ದೂರವಾಣಿಕರೆ:– ಕಲ್ಯಾಣಿಯವರೇ ನಿಮ್ಮ ತಾಯಿಯವರು ಮುಂಬಯಿ'ಯಲ್ಲಿ ಒಂದು ಸಭೆಗೆ ಹಾಜರಾಗಬೇಕಿತ್ತು. ಆದರೆ ಆ ಸಭೆ ಮುಂದೂಡಲ್ಪಟ್ಟಿದೆ. ದಯವಿಟ್ಟು ಅವರಿಗೆ ಇದನ್ನು ತಿಳಿಸಿ. ಅವರು 'ಸಭೆಗೆ' ಹಾಜರಾಗಬೇಕಾದ ದಿನಾಂಕವನ್ನು ಮುಂದೆ ಸೂಚಿಸಲು ಹಾಗೂ ವಿಮಾನ ಪ್ರಯಾಣವನ್ನು ರದ್ದುಗೊಳಿಸಲು ಸಹಾಯವಾಗುತ್ತದೆ.

ಕಲ್ಯಾಣಿ:– 'ಭಾರ್ಗವಿ' ರವರೆ ನಾನು ಅಗತ್ಯವಾಗಿ ಮಾಡುತ್ತೇನೆ.

**23.** 'ನನ್ನ ಕನಸು' – ಈ ವಿಷಯದ ಬಗ್ಗೆ ವಾಕ್ಯವೃಂದ ರಚಿಸಿ. **[6]**

ಅಥವಾ

'ಜ್ಞಾನಪೀಠ ಪ್ರಶಸ್ತಿ' – ಈ ವಿಷಯ ಕುರಿತು ಈ ಕೆಳಕಂಡ ಸುಳುಹುಗಳನ್ನು ಆಧರಿಸಿ ಪ್ರಬಂಧ ಬರೆಯಿರಿ.

(i) ಸಮಾಜ ಸೇವೆ ಮಾಡುವವರಿಗೆ –ಸಂಘ ಸಂಸ್ಥೆಗಳ ಗೌರವಸಲ್ಲಿಸುವಿಕೆ.

(ii) ಸಾಹಿತ್ಯ ಕ್ಷೇತ್ರದಲ್ಲಿ ಸೇವೆಸಲ್ಲಿಸಿದ ಮಹಾಲೇಖಕರಿಗೆ ಗೌರವ ಪ್ರಶಸ್ತಿ,

(iii) ಆಧುನಿಕ ಭಾರತದಲ್ಲಿ 'ಸೃಜನಾತ್ಮಕ ಸಾಹಿತ್ಯವನ್ನು ಬಳಸಿ, ಪ್ರೋತ್ಸಾಹಿಸಲು ರೂಪುಗೊಂಡ ಸಂಸ್ಥೆ– ಜ್ಞಾನಪೀಠ ಪ್ರಶಸ್ತಿ.

(iv) ಸ್ಥಾಪನೆ 1944 ಶಾಂತಿ ಪ್ರಸಾದ್ ಜೈನ್, 1965ರಿಂದ ಪ್ರಶಸ್ತಿ ವಿತರಣೆ ಆರಂಭ.

(v) ಪ್ರಾಚೀನ ಹಸ್ತಪ್ರತಿಗಳ ಪ್ರಕಟಣೆ, ಪ್ರೋತ್ಸಾಹ

(vi) ನಿಯಮಗಳು (1) ಭಾರತೀಯ ಪ್ರಜೆಯಾಗಿರಬೇಕು. (2) ಲೇಖಕ ಜೀವಂತವಾಗಿರಬೇಕು.

(vii) ಪ್ರಶಸ್ತಿ ಪಡೆದ ಕನ್ನಡದ ಕವಿಗಳು ಹೆಸರುಗಳು.

(viii) ಒಮ್ಮೆ ಮಾತ್ರ ಪಡೆಯಲು ಸಾಧ್ಯ.

## ವಿಭಾಗ–ಸಿ : ವ್ಯಾಕರಣ

**24.** 'ಮಾತೆಂಬ ಮುತ್ತು' – ಈ ವಾಕ್ಯದಲ್ಲಿನ ಅಲಂಕಾರವನ್ನು ಬರೆಯಿರಿ, ಅಲಂಕಾರದ ಹೆಸರನ್ನು ಬರೆಯಿರಿ. **[2]**

**25.** ಈ ಕೆಳಕಂಡ ಸಂಸ್ಕೃತ ಪದಗಳಿಗೆ ಕನ್ನಡದ ಪದಗಳನ್ನು ಬರೆಯಿರಿ. (2ಕ್ಕೆ ಮಾತ್ರ) **[2]**

(i) ಹಂಸ

(ii) ಮೃಗ

(iii) ಯಮ

(iv) ಪ್ರಯಾಣ



UNNATI EDUCATION
9899436384: 9654-279-279

**26.** ಈ ಕೆಳಗೆ ಕೊಟ್ಟಿರುವ ಪದಗಳ ವಿಗ್ರಹ ವಾಕ್ಯಮಾಡಿ 'ಸಮಾಸ'ವನ್ನು ಹೆಸರಿಸಿ. (2ಕ್ಕೆ ಮಾತ್ರ) **[2]**

(i) ಕಟ್ಟಡವಿ

(ii) ಕೆರೆಕಟ್ಟೆಗಳು

(iii) ವಕ್ರದಂತ

(iv) ನಡುಮನೆ

**27.** ಬಿಟ್ಟ ಸ್ಥಳಗಳನ್ನು ಸೂಚನೆಗನುಗುಣವಾಗಿ ಭರ್ತಿ ಮಾಡಿ: **[4×1=4]**

(i) ಔಷದೋಪಚಾರ, ಎಂಬುವುದು________ ಸಂಧಿಗೆ ಉದಾಹರಣೆ

(ii) 'ಮರ' ಈ ಪದಕ್ಕೆ ಚತುರ್ಥಿ ವಿಭಕ್ತಿ ಪ್ರತ್ಯಯ ಸೇರಿದಾಗ _______ಆಗುತ್ತದೆ.

(iii) ನ್ಯಾಯಾಸ್ಥಾನ _______ಸಂಧಿ ಆಗಿದೆ.

(iv) ಆಗಾಗ _______ಸಂಧಿ ಆಗಿದೆ.

**28.** ಈ ಕೆಳಗಿನ ಪದಗಳಲ್ಲಿ ಗುಂಪಿಗೆ ಸೇರದ ಪದವನ್ನು ಗುರುತಿಸಿ. **[4×1=4]**

(i) ಜಕಾನ, ಗುಳ್ಳುಳಕ, ಪಾರಿವಾಳ, ಕೊಕ್ಕರೆ

(ii) ಹೆಜ್ಜೇನು, ಕಿರ್ಜೇನು ಕೊಲುಜೇನು, ಹೂವುಮಕರಂದ

(iii) ಸೀತೆ, ಸಾವಿತ್ರಿ, ದ್ರೌಪದಿ, ಮಂಥರೆ

(iv) ಭತ್ತ, ಗೋಧಿ, ಜೋಳ ಕಾಳು,

ಅಥವಾ

ಬೆಂಗಳೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆಯನ್ನು ಕೊಡಲಾಗಿದೆ. ಅದರ ಸಹಾಯದಿಂದ ಏಕ ರೇಖಾ ಚಿತ್ರ ರಚಿಸಿ.

| ವರ್ಷ | 2009 | 2010 | 2011 | 2012 | 2013 | 2014 | 2015 | 2016 | 2017 | 2018 |
|---|---|---|---|---|---|---|---|---|---|---|
| ವಿದ್ಯಾರ್ಥಿಗಳ ದಾಖಲಾತಿ | 475 | 600 | 700 | 810 | 850 | 900 | 950 | 1000 | 1150 | 1250 |

## ವಿಭಾಗ–ಡಿ–ಸಾಹಿತ್ಯ

**29.** ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ: (2ಕ್ಕೆ ಮಾತ್ರ) **[2×3=6]**

(i) 'ಶಿವ' ಯಾವಾಗ ಒಗೊಡುವನು?

(ii) ಕಾಗೆ ಕೋಳಿಯ ದೃಷ್ಟಾಂತ ಕೊಟ್ಟ ಬಸವಣ್ಣ ಪ್ರತಿಪಾದಿಸಿದ ತತ್ವವೇನು?

(iii) ಎಲ್ಲವನ್ನು ಒಳಗೊಂಡಿದ್ದರೂ ಏನೂ ಅಲ್ಲದಂತೆ ಇರುವುದು ಯಾವುದು?

(iv) ಲೋಕದೊಳಗೆ ಸ್ತುತಿ–ನಿಂದೆ ಬಂದಾಗ ಹೇಗಿರಬೇಕು?

**30.** ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ: (2ಕ್ಕೆ ಮಾತ್ರ) **[2×3=6]**

(i) 'ಸ್ತ್ರೀ' ಲೋಕದ ಮೇಲೆ ಗಾಂಧೀಜಿಗೆ ವಿಶ್ವಾಸ ಮೂಡಲು ಕಾರಣವೇನು?

(ii) ಅತ್ಯಾಧುನಿಕ ಸಂಪರ್ಕ ಮಾಧ್ಯಮಗಳು ಏನನ್ನು ಸೃಷ್ಟಿಸುತ್ತವೆ?

(iii) ಹ್ಯೂಯೆನ–ತ್ಸಾಂಗ್ ಯಾವ ಗ್ರಂಥದಲ್ಲಿ ತನ್ನ ಪ್ರವಾಸದ ಬಗೆಗೆ ಬರೆದಿಟ್ಟನು?

(iv) ಮಂಡೋದರಿ ಸೀತೆಯನ್ನು ಕೊನೆಯಲ್ಲಿ ಬೇಡಿಕೊಳ್ಳುವ ಕೋರಿಕೆ ಏನು?

**31.** ಈ ಕೆಳಗಿನ ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಗೆ 10 ರಿಂದ 40 ಪದಗಳಲ್ಲಿ ಉತ್ತರಿಸಿ: **[3×1=3]**

(i) ಮಾದೇಶ್ವರರು ಕಾರಯ್ಯ – ಬಿಲ್ಲಯ್ಯರ ಜತೆ ಕಾಡಿನಲ್ಲಿ ಹೋಗುವಾಗ ನಡೆದ ಪ್ರಸಂಗ ಹಾಗೂ ಅದರ ಪರಿಣಾಮವನ್ನು ವಿವರಿಸಿ.

(ii) 'ಜಟ್ಟಿ ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ'–ಈಗಾದೆ ಮಾತನ್ನು ವಿಸ್ತರಿಸಿ:



UNNATI EDUCATION
9899436384: 9654-279-279